# ದಾವಣಗೆರೆ ವಿಶ್ವವಿದ್ಯಾನಿಲಯ

ಕುಲಸಚಿವ(ಪರೀಕ್ಷಾಂಗ) ರವರ ಕಾರ್ಯಾಲಯ, ಶಿವಗಂಗೋತ್ರಿ,ದಾವಣಗೆರೆ–577002

E-mail: registrarevaluation@gmail.com ದೂ.ಸಂಖ್ಯೆ : 08192–208420, 208104


ಸಂಖ್ಯೆ:ದಾವಿ/ಪವಿ/ಯು.ಜಿ/ /2017-18 ದಿನಾಂಕ:28-9-2017

## ಪರಿಷ್ಕೃತ ಪ್ರಕಟಣೆ

ವಿಷಯ: ನವೆಂಬರ್/ಡಿಸೆಂಬರ್-2017ರಲ್ಲಿ ನಡೆಯುವ ಸ್ನಾತಕ ಪದವಿ ಪರೀಕ್ಷೆಗಳಿಗೆ ಅರ್ಜಿ /ಶುಲ್ಕ ಪಾವತಿಸಲು ಅವಧಿ ವಿಸ್ತರಣೆ ಹಾಗೂ 2011-12 ನೇ ಸಾಲಿನ ದ್ವಿಗುಣ ಅವಧಿ ಪೂರೈಸಿದ ವಿದ್ಯಾರ್ಥಿಗಳಿಗೆ ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅನುಮತಿಸುತ್ತಿರುವ ಬಗ್ಗೆ.

ಉಲ್ಲೇಖ:1. ಈ ಕಛೇರಿ ಪ್ರಕಟಣೆ ಸಂಖ್ಯೆ: ದಾವಿ: ಪವಿ :2017-18 :1524 ದಿನಾಂಕ:22-09-2017

2. ಮಾನ್ಯ ಕುಲಪತಿಗಳ ಮೌಖಿಕ ಆದೇಶದ ದಿನಾಂಕ : 28-9-2017

*******

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನವೆಂಬರ್/ಡಿಸೆಂಬರ್-2017ರ ಮಾಹೆಯಲ್ಲಿ ನಡೆಯುವ ಸ್ನಾತಕ ಪದವಿ ಪರೀಕ್ಷೆಗಳಿಗೆ ನಿಗದಿತ ದಿನಾಂಕದೊಳಗೆ ಶುಲ್ಕ ಪಾವತಿಸಿ ಪರೀಕ್ಷಾ ಅರ್ಜಿಗಳನ್ನು ವಿ.ವಿ ಗೆ ಸಲ್ಲಿಸಲು ಉಲ್ಲೇಖ (01)ರ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು. ಆದರೆ 4 ದಿನ ಸರ್ಕಾರಿ ರಜೆ ಹಾಗೂ ಸಿಂಡಿಕೇಟ್ ಸಭೆಯ ನಿರ್ಣಯನುಸಾರ ಪರೀಕ್ಷಾ ಅರ್ಜಿ ಹಾಗೂ ಶುಲ್ಕ ಪಾವತಿಸಲು ಈ ಕೆಳಕಂಡಂತೆ ಪರಿಷ್ಕರಿಸಲಾಗಿದೆ.

## ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕಗಳು

| | | | |
|---|---|---|---|
| ದಂಡಶುಲ್ಕವಿಲ್ಲದೆ | ------------------ | 21-09-2017 ರಿಂದ | 10-10-2017 ರವರೆಗೆ |
| ದಂಡಶುಲ್ಕ ರೂ.550 ರಂತೆ ಪ್ರತಿ ಸೆಮಿಸ್ಟರ್‌ಗೆ | ------------------ | 11-10-2017 ರಿಂದ | 13-10-2017 ರವರೆಗೆ |

ಸೂಚನೆ:- 1. ಅಂತಿಮ ದಂಡಶುಲ್ಕದ ಅವಧಿ ಕೊನೆಗೊಂಡ ನಂತರ ಯಾವುದೇ ಕಾರಣಕ್ಕೂ ಅರ್ಜಿ ಸ್ವೀಕರಿಸುವುದಿಲ್ಲ.

2 2011-12ನೇ ಸಾಲಿನಲ್ಲಿ ಸ್ನಾತಕ ಪದವಿಗೆ ಪ್ರವೇಶ ಪಡೆದು ದ್ವಿಗುಣ ಅವಧಿ ಪೂರೈಸಿದ (Double the Duration) ವಿದ್ಯಾರ್ಥಿಗಳಿಗೆ ಮಾತ್ರ ನವೆಂಬರ್/ಡಿಸೆಂಬರ್-2017 ರಲ್ಲಿ ನಡೆಯುವ ಪರೀಕ್ಷೆಗಳಿಗೆ ಪ್ರಸ್ತುತ ಶುಲ್ಕದೊಂದಿಗೆ ವಿಶೇಷ ಶುಲ್ಕ ರೂ. 500/- ಪಾವತಿಸಿ ಪರೀಕ್ಷೆ ತೆಗೆದುಕೊಳ್ಳಲು ಅನುಮತಿಸಲಾಗಿದೆ.

3 ಇನ್ನು ಉಲ್ಲೇಖ (01)ರಲ್ಲಿನ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲಾ.

28/9

ಕುಲಸಚಿವರು (ಪರೀಕ್ಷಾಂಗ),
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-57700

ಗೆ,

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಬಿ.ಎ/ಬಿ.ಎಸ್ಸಿ/ಬಿ.ಕಾಂ/ಬಿ.ಬಿ.ಎಂ/ಬಿ.ಸಿ.ಎ/ಬಿ.ಎಸ್.ಎ/ಬಿ.ಎಸ್.ಡಬ್ಲ್ಯೂ/ಬಿ.ವಿ.ಎ/ಬಿ.ಎಫ್.ಡಿ ಕಾಲೇಜುಗಳ ಪ್ರಾಚಾರ್ಯರುಗಳಿಗೆ.

ಪ್ರತಿ:

1. ಜಿಲ್ಲಾಧಿಕಾರಿಗಳು, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ದಾವಣಗೆರೆ/ಚಿತ್ರದುರ್ಗ ಜಿಲ್ಲೆ.
2. ಆಪ್ತಶಾಖೆ, ಮಾನ್ಯ ಕುಲಪತಿಗಳು, ಕುಲಸಚಿವ(ಆಡಳಿತ), ಕುಲಸಚಿವ(ಪರೀಕ್ಷಾಂಗ), ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
3. ಉಪಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
4. ಅಧೀಕ್ಷಕರು, ವಿಷಯ ನಿರ್ವಾಹಕರುಗಳು, ಪರೀಕ್ಷಾಂಗ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
5. ಕಛೇರಿ ಪ್ರತಿ.